ಜಿಲ್ಲಾ ಪೋಲೀಸ್ ಮಂಖ್ಯಾಧಿಕಾರಿಗಳ ವರ್ಗಾವಣೆ ಬಗ್ಗೆ

೭೩.(೨೯೧) ಶ್ರೀ ಐ. ಬಿ. ಶಂಕರ್, (ಚಿಕ್ಕಮಗಳೂರು).—ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ;—

ಅ) ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ದಕ್ಷತೆಯಿಂದ ಸೇವೆ ಸಲ್ಲಿಸಿದ ಜಿಲ್ಲಾ ಪೋಲೀಸ್ ಅಧಿಕಾರಿಗಳನ್ನು ವಿನಾಕಾರಣ ಇಲಾಖಾ ತರಬೇತಿ ಕಾಲೇಜುಗಳಂತಹ ಬೇರೆ ಬೇರೆ ಸ್ಥಳಗಳಿಗೆ ವರ್ಗಾಯಿಸುತ್ತಿರುವುದಕ್ಕೆ ಕಾರಣವೇನು?

ಆ) ಉತ್ತಮ, ದಕ್ಷ ಅಧಿಕಾರಿಗಳನ್ನು ಅವದಿಪೂರ್ವ ವರ್ಗಾವಣೆ ಮಾಡುತ್ತಿರುವುದಕ್ಕೆ ಕಾರಣವೇನು. ಹಾಗೂ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದಿಲ್ಲವೆ ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಇಂತಹ ವರ್ಗಾವಣೆಗಳನ್ನು ಮಾಡಿರುವುದಿಲ್ಲ.

ಆ) ''ಅ'' ಭಾಗಕ್ಕೆ ಕೊಟ್ಟ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ರಂಗ ಮಂದಿರಕ್ಕೆ ಸಹಾಯ ಧನ ಬಿಡುಗಡೆ ಮಾಡುವ ಬಗ್ಗೆ

೭೪(೨೮೯) ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಸಾರ್ವಜನಿಕ ವಂತಿಗೆಯಿಂದ ನಿರ್ಮಿತವಾಗಿರುವ ಚಿಕ್ಕಮಗಳೂರು ಜಿಲ್ಲಾ ರಂಗಮಂದಿರಕ್ಕೆ ಸರ್ಕಾರ ಧನಸಹಾಯ ನೀಡದಿರಲು ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಚಿಕ್ಕಮಗಳೂರು ಜಿಲ್ಲಾ ರಂಗಮಂದಿರ ನಿರ್ಮಾಣಕ್ಕೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಧನಸಹಾಯ ನೀಡಲು ಅವಕಾಶ ಮಾಡಿಲ್ಲದ ಕಾರಣ ಈತನಕ ನೀಡಲಾಗಿಲ್ಲ. ಈಗ ಹೆಚ್ಚುವರಿ ಹಣ ಪಡೆದು ಧನಸಹಾಯ ಮಂಜೂರು ಮಾಡಲು ಪರಿಶೀಲಿಸಲ್ಪಡುತ್ತಿದೆ.

ಆಯುರ್ವೇದ ಸರಕಾರಿ ಕಾಲೇಜು ಹಾಗೂ ಆಸ್ಪತ್ರೆಗಳ ಬಗ್ಗೆ

೭೫ (೩೫೪) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

೧ ರಾಜ್ಯದಲ್ಲಿರುವ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳೆಷ್ಟು ?

೨ ಈ ಎಲ್ಲಾ ಕಾಲೇಜು ಮತ್ತು ಆಸ್ಪತ್ರೆಗಳಲ್ಲಿರುವ ಅವಶ್ಯಕ ಸಿಬ್ಬಂದಿ ಹುದ್ದೆಗಳೆಷ್ಟು ?

೩ ಎಷ್ಟು ಹುದ್ದೆಗಳು ಖಾಲಿ ಇವೆ ?

೪ ಇಲ್ಲಿನ ಆಸ್ಪತ್ರೆಗಳಲ್ಲಿ ಕನಿಷ್ಟ ಅವಶ್ಯಕ ಬಟ್ಟೆ, ಕತ್ತರಿ, ಗ್ಲಾಸ್‌ನಂತಹ ವಸ್ತುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೫ ಈ ಆಸ್ಪತ್ರೆಗಳಿಗೆ ಪ್ರತಿವರ್ಷ ಔಷಧಿಗಳಿಗಾಗಿ ಒದಗಿಸುವ ಹಣ ಎಷ್ಟು ? ಇದನ್ನು ಹೆಚ್ಚಿಸುವ ಯೋಜನೆ ಏನಾದರೂ ಇದೆಯೇ ?

೬ ಈ ಕಾಲೇಜು ಮತ್ತು ಆಸ್ಪತ್ರೆಗಳ ಸುಧಾರಣೆಗಾಗಿ ಸರ್ಕಾರದವರು ಏನೇನು ಕ್ರಮಗಳನ್ನು ಕೈಗೊಳ್ಳುವರು ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

೧ ಮೂರು.

೨ ೧೪೪

೩ ೫೦

೪ ಇಲ್ಲ